# IN THE COURT OF THE ADDL. SENIOR CIVIL JUDGE & JMFC., GUBBI

# **OS - 176/2022**

Witness present and duly sworn on : 05.02.2026.

Cross Examination: by Counsel for Defendant No.6 :

ನನ್ನ ತಂದೆಯ ಹೆಸರು ದಿವಂಗತ ರಾಮಲಿಂಗೇಗೌಡ. ಸದರಿ ರಾಮಲಿಂಗೇಗೌಡ ರವರಿಗೆ ಇಬ್ಬರು ಮಕ್ಕಳು. ಅವರುಗಳು ಗಂಗಾಧರಯ್ಯ ಮತ್ತು ಲಿಂಗೇಗೌಡ. ಈ ಹಿಂದೆ ನಾನು 6 ನೇ ಪ್ರತಿವಾದಿಯಾಗಿ ಈ ದಾವೆಯಲ್ಲಿ ಇದ್ದೇನು ಎಂದರೆ ಸರಿ. ನನ್ನ ತಾಯಿಯ ಹೆಸರು ಗೌರಮ್ಮ ಮತ್ತು ಅವರು ಈ ದಾವೆಯಲ್ಲಿ ಈ ಹಿಂದೆ 5 ನೇ ಪ್ರತಿವಾದಿಯಾಗಿ ಇದ್ದರು ಎಂದರೆ ಸರಿ. ಈ ದಾವೆಯ ವಾದಿಯಾದ ಎ.ಬಿ ರುದ್ರಯ್ಯ ರವರು ನಮ್ಮ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಈ ದಾವೆಯಲ್ಲಿ ನಾವು ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಲಿಖಿತ ಪತ್ರದಲ್ಲಿ ನಾವು ಬರೆಸಿರುವ ವಿಚಾರ ನನಗೆ ಗೊತ್ತಿದೆ. ನನ್ನ ಲಿಖಿತ ಪತ್ರದಲ್ಲಿ ದಾವಾ ಸರ್ವೆ ನಂ.105/1 ಅದರ ಹಳೇ ಸರ್ವೆ ನಂ.48 ವಿಭಾಗ ಆಗಿಲ್ಲ ಎಂದರೆ ಬರೆಸಿರುತ್ತೇವೆ. ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ಹಿಂದೇಯೆ ವಿಭಾಗ ಆಗಿದ್ದರು ಎಂದರೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಚಾರವನ್ನು ನನ್ನ ಲಿಖಿತ ಪತ್ರದಲ್ಲಿ ಹೇಳಿರುತ್ತೇನೆ.

ನನ್ನ ತಂದೆಯ ಮರಣದ ನಂತರ ಅವರಿಗೆ ಪಿತ್ರಾರ್ಜಿತ ಆಸ್ತಿಗಳು ಬಂದಿದ್ದವು ಎಂದರೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಬಂದಿದ್ದವು. ನನ್ನ ತಂದೆಗೆ ಸರ್ವೆ ನಂ.193, ಬೀರಮಾರನಹಳ್ಳಿಯ ಸರ್ವೆ ನಂ.84, 77 ಮತ್ತು ಇತರೆ ಜಮೀನುಗಳು ಬಂದಿದ್ದವು. ನನ್ನ ತಂದೆಗೆ ಬಂದಿದ್ದ ಪಿತ್ರಾರ್ಜಿತ ಆಸ್ತಿಗಳನ್ನು ನಾನು ಮತ್ತು ನನ್ನ ಅಣ್ಣ ಗಂಗಾಧರಯ್ಯನವರು ವಿಭಾಗ ಮಾಡಿಕೊಂಡಿದ್ದರು ಎಂದರೆ ದಾವಾ ಆಸ್ತಿಯನ್ನು ಹೊರತುಪಡಿಸಿ ವಿಭಾಗ ಮಾಡಿಕೊಂಡಿರುತ್ತೇವೆ. ನಾನು, ನನ್ನ ಅಣ್ಣ ಮತ್ತು ನನ್ನ ತಾಯಿ ಮಾಡಿಕೊಂಡಿದ್ದ ವಿಭಾಗ ಪತ್ರದಲ್ಲಿ ದಾವಾ ಆಸ್ತಿಯನ್ನು ವಿಭಾಗ ಮಾಡಿಕೊಂಡಿಲ್ಲ ಎಂದು ಪಾಲುಪಟ್ಟಿಯಲ್ಲಿ ನಮೂದು ಮಾಡಿದ್ದಿರಾ ಎಂದರೆ ನಮೂದು ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು

ದಾವಾ ಆಸ್ತಿಯು ನನ್ನ ತಂದೆ ಮತ್ತು ತಾಯಿಗೆ ಬರದೆ ಇದ್ದ ಕಾರಣ ಸದರಿ ನಮೂದು ಪಾಲುಪಟ್ಟಿಯಲ್ಲಿ ನಮೂದು ಮಾಡಿರುವುದಿಲ್ಲ. ದಾವಾ ಆಸ್ತಿಯು ನನ್ನ ತಂದೆ ತಾಯಿಗೆ ಬಂದಿಲ್ಲ ಆದ ಕಾರಣ ವಿಭಾಗ ಮಾಡಿಕೊಂಡಿಲ್ಲ ಎಂದು ಪಾಲುಪಟ್ಟಿಯಲ್ಲಿ ನಮೂದು ಮಾಡಿಲ್ಲ.

ನನ್ನ ತಂದೆಯ ಜೀವಿತ ಕಾಲದಲ್ಲಿ ಅವರ ಅಣ್ಣ ತಮ್ಮಂದಿರಿಗೆ ದಾವಾ ಆಸ್ತಿಯು ಬಂದಿಲ್ಲ ಎಂದು ತೋರಿಸಲು ದಿನಾಂಕಃ 01.06.1958 ರ ವಿಭಾಗ ಪತ್ರವನ್ನು ಹಾಜರುಪಡಿಸಿದ್ದೇನೆ. ನನ್ನ ತಂದೆಯ ಜೀವಿತ ಕಾಲದಲ್ಲಿ ದಾವಾ ಆಸ್ತಿಯು ವಿಭಾಗ ಆಗಿಲ್ಲ ಆದ ಕಾರಣ ದಾವಾ ಆಸ್ತಿಯಲ್ಲಿ ನಮಗೆ ಪಾಲು ಬರಬೇಕೆಂದು ದಾವೆಯನ್ನು ಸಲ್ಲಿಸಿರಲಿಲ್ಲ. 1958 ರಿಂದ ಇಲ್ಲಿಯವರೆಗೂ ದಾವೆ ಯಾಕೆ ಸಲ್ಲಿಸಿಲ್ಲ ಎಂದರೆ ಅಣ್ಣ ತಮ್ಮಂದಿರು ಅನ್ಯೋನ್ಯವಾಗಿ ಇರಲಿಲ್ಲ ಮತ್ತು ನನ್ನ ತಂದೆ 1995 ರಲ್ಲಿ ಮತ್ತು ನನ್ನ ತಾಯಿ ಅನಕ್ಷರಸ್ಥೆ ಆದ ಕಾರಣ ವಿಭಾಗ ಕೋರಿ ದಾವೆ ಸಲ್ಲಿಸಿರಲಿಲ್ಲ.

ವಾದಿ ರುದ್ರಯ್ಯನವರು ದಾವೆಯನ್ನು ಸಲ್ಲಿಸಿರುತ್ತಾರೆ. ಅವರು ಈ ದಾವೆಯ ವಾದ ಪತ್ರವನ್ನು ಬರೆಸಿದ್ದಾರೆಂದರೆ ಸರಿ. ವಾದಿ ರುದ್ರಯ್ಯನವರು ಅವರ ಹಕ್ಕು ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ಇರಬಹುದು. ರುದ್ರಯ್ಯ ರವರು ಹಾಕಿರುವ ವಾದ ಪತ್ರದಲ್ಲಿ ನಾವು ಪ್ರತ್ಯೇಕವಾಗಿ ವಾದ ಪತ್ರ ಬರೆಸಿಲ್ಲ ಎಂದರೆ ತಿದ್ದುಪಡಿಯ ಮೂಲಕ ಬರೆಸಿರುತ್ತೇವೆ. ತಿದ್ದುಪಡಿ ವಾದ ಪತ್ರದಲ್ಲಿ ದಾವಾ ಆಸ್ತಿಯು ವಿಭಾಗ ಆಗಿಲ್ಲ ಮತ್ತು ಎಲ್ಲರಿಗೂ ಬರಬೇಕೆಂದು ಬರೆಸಿರುತ್ತೇನೆ. ಸದರಿ ತಿದ್ದುಪಡಿ ವಾದ ಪತ್ರದಲ್ಲಿ ಮೇಲೆ ಹೇಳಿರುವ ವಿಚಾರವನ್ನು ಬರೆಸಿಲ್ಲ ಎಂದರೆ ಸರಿಯಲ್ಲ.

ವಾದಿ ರುದ್ರಯ್ಯ ಹಾಗೂ ನನಗೆ ಮತ್ತು ನನ್ನ ಅಣ್ಣನ ನಡುವೆ ಜಮೀನಿನ ವಿಚಾರವಾಗಿ ಬಹಳಷ್ಟು ಗಲಾಟೆಗಳಾಗಿವೆ ಎಂದರೆ ಸರಿಯಲ್ಲ. ನನ್ನ ಅಣ್ಣ ಗಂಗಾಧರಯ್ಯನವರು ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪನ ಮಕ್ಕಳಿಂದ ಪಿತ್ರಾರ್ಜಿತ ಆಸ್ತಿಗಳನ್ನು ಜಮೀನನ್ನು ಖರೀದಿ ಮಾಡಿದ್ದಾರೆಂದರೆ ಬೀರಮಾರನಹಳ್ಳಿಯ ಸರ್ವೆ ನಂ.77/1 ಜಮೀನನ್ನು ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾವು ಮತ್ತು ರುದ್ರಯ್ಯ ರವರು ಸುಳ್ಳು ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ.

ಮೂಲ ಪುರುಷ ಲಿಂಗೇಗೌಡ ರವರಿಗೆ 4 ಜನ ಗಂಡು ಮಕ್ಕಳು ಮತ್ತು 10 ಜನ ಹೆಣ್ಣು ಮಕ್ಕಳು. ಅವರುಗಳು ವೀರಭದ್ರಯ್ಯ, ಬೋರಯ್ಯ, ಬೋಚೆಗೌಡ, ರಾಮಲಿಂಗೇಗೌಡ, ಬೋರಮ್ಮ, ಪುಟ್ಟಮ್ಮ, ಶಿವಮ್ಮ, ಗಂಗಮ್ಮ, ಪಾರ್ವತಮ್ಮ, ಗಂಗಲಕ್ಷ್ಮಮ್ಮ, ಹುಚ್ಚಮ್ಮ, ಶಿವರುದ್ರಮ್ಮ, ದೇವಿರಮ್ಮ. ನನ್ನ ತಂದೆಯ ಸಹೋದರಿಯರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸಾಕ್ಷಿ ಮುಂದುವರೆದು ಮಾಹಿತಿ ಇರದೆ ಇದ್ದ ಕಾರಣ ಸೇರಿಸಿರುವುದಿಲ್ಲ.

ವೀರಭದ್ರಯ್ಯ ಬಿನ್ ಲೀಗೆಗೌಡರವರಿಗೆ ಹುಚ್ಚೀರಯ್ಯ ಮಗ ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು. ಅವರುಗಳು ರಂಗಮ್ಮ, ಗೌರಮ್ಮ, ಲಕ್ಷ್ಮಮ್ಮ. ಇನ್ನೊಬ್ಬರ ಹೆಸರು ಗೊತ್ತಿಲ್ಲ. ಹೆಣ್ಣುಮಕ್ಕಳಲ್ಲಿ ಮೂರು ಜನ ಜೀವಂತ ಇದ್ದಾರೆ ಒಬ್ಬರು ಮರಣ ಹೊಂದಿದ್ದಾರೆ. ವೀರಭದ್ರಯ್ಯನವರ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸಾಕ್ಷಿ ಮುಂದುವರೆದು ಮಾಹಿತಿ ಇರದೆ ಇದ್ದ ಕಾರಣ ಸೇರಿಸಿರುವುದಿಲ್ಲ. ನಮ್ಮ ಮನೆಯ ಕುಟುಂಬದ ಸದಸ್ಯರ ಮಾಹಿತಿಯನ್ನು ತಿಳಿದುಕೊಂಡು ದಾವೆ ಸಲ್ಲಿಸಿದ್ದಾರೆಂದರೆ ಗೊತ್ತಿದ್ದ ಮಾಹಿತಿ ಮೇಲೆ ಸಲ್ಲಿಸಿರುತ್ತೇನೆ. ಸದರಿ ಹುಚ್ಚೇಗೌಡರವರು ಜೀವಂತ ಇರುವುದಿಲ್ಲ. ಅವರಿಗೆ ಇಬ್ಬರು ಮಕ್ಕಳು. ಅವರುಗಳು ಸುನೀಲ್ ಮತ್ತು ಶಿಲ್ಪ. ಹುಚ್ಚೇಗೌಡರವರ ಹೆಂಡತಿ ಜೀವಂತ ಇದ್ದಾರೆ. ಹುಚ್ಚಈರಯ್ಯನವರ ಹೆಂಡತಿ ಮತ್ತು ಮಕ್ಕಳನ್ನು ದಾವೆಯಲ್ಲಿ ಸೇರಿಸಿದ್ದೇವೆ. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಆದರೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಬೋಚೇಗೌಡ ಬಿನ್ ಲಿಂಗೇಗೌಡರವರಿಗೆ 4 ಜನ ಮಕ್ಕಳು. ಅವರುಗಳು ವಾದಿ ಎ.ಬಿ ರುದ್ರಯ್ಯ, ರಾಜಣ್ಣ, ಶಂಕರಲಿಂಗೇಗೌಡ @ ಶಂಕ್ರಪ್ಪ ಮತ್ತು ಶಾರದಮ್ಮ. ಈ ದಾವೆಯಲ್ಲಿ ಶಾರದಮ್ಮ ರವರನ್ನು ಸೇರಿಸಿಲ್ಲ.

ಬೋರಯ್ಯ ಬಿನ್ ಲಿಂಗೇಗೌಡರವರಿಗೆ ಮೂರು ಜನ ಮಕ್ಕಳು. ಅವರುಗಳು ಶಿವಣ್ಣ, ಗಂಗಯ್ಯ, ಶಂಕ್ರಪ್ಪ. ಸದರಿ ಶಿವಣ್ಣ ಜೀವಂತ ಇಲ್ಲ. ಬೋರಯ್ಯ ರವರ ಹೆಂಡತಿ ನಿಂಗಮ್ಮ ಜೀವಂತ ಇದ್ದಾರೆ. ಶಿವಣ್ಣ ರವರ ಹೆಂಡತಿ ಜಯಮ್ಮ, ಮಕ್ಕಳಾದ ರವಿಕುಮಾರ್ ರವರು ಮತ್ತು ನಾಗರಾಜು ರವರು ಈ ದಾವೆಯಲ್ಲಿ ಸೇರಿಕೊಂಡಿದ್ದಾರೆ. ಅವರುಗಳು ಈ ದಾವೆಯಲ್ಲಿ ಸೇರಿಲ್ಲ ಎಂದರೆ ಸರಿಯಲ್ಲ.

ಬೋರಮ್ಮ ಬಿನ್ ?ಲಿಂಗೇಗೌಡ ರವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಬೋರಮ್ಮ ರವರ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಬೋರಮ್ಮ ರವರ ಮಗ ಚಲುವೆಗೌಡ

ಮತ್ತು ಅವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ಇರಬಹುದು. ಬೋರಮ್ಮರವರಿಗೆ ಬೆಟ್ಟಸ್ವಾಮಿ, ಶಾರದಾ, ಕಲ್ಯಾಣಮ್ಮ ಎಂಬ ಮಕ್ಕಳು ಎಂದರೆ ಇರಬಹುದು. ಮೂಲಪುರುಷ ಲಿಂಗೇಗೌಡ ರವರ ಎಲ್ಲ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಾಹಿತಿ ಇರದೆ ಇದ್ದ ಕಾರಣ ಸೇರಿಸಿರುವುದಿಲ್ಲ.

(Further cross examination deferred at the request of counsel for the defendant No.6)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi